**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1700/2022**

| | | | |
|---|---|---|---|
| **ಹೆಸರು** | **:** | **ಜಟ್ಟೆಪ್ಪ** | **ದೋ.ಸಾ. 1** |
| **ತಂದೆಯ ಹೆಸರು** | **:** | **ಭೀಮಣ್ಣ** | **ಪ್ರಾ.ಸಾ. 1** |
| **ವಯಸ್ಸು** | **:** | **36 ವರ್ಷ** | **ದಿನಾಂಕಃ 05-09-2023** |
| **ಉದ್ಯೋಗ** | **:** | **ಅಬಕಾರಿ ನೀರಿಕ್ಷಕರು** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 10-03-2021 ರಿಂದ ಇಲ್ಲಿಯವರೆಗೆ ನಾನು ಚಿಂಚೋಳಿ ವಲಯ ಅಬಕಾರಿ ನೀರಿಕ್ಷಕನಾಗಿ ಕೆಲಸ ಮಾಡಿದ್ದೇನೆ.

ದಿನಾಂಕ 12-07-2022 ರಂದು ರಾತ್ರಿ 09-00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಬಾತ್ಮಿದಾರರು ನನಗೆ ಕರೆ ಮಾಡಿ ಹಲಕೋಡಾ ಗ್ರಾಮದಲ್ಲಿ ಅಕ್ರಮ ಸೇಂದಿ ಸಾಗಾಟವಾಗುತ್ತಿದೆ ಎಂದು ಬಾತ್ಮಿ ಕೊಟ್ಟ ಮೇರೆಗೆ ನಾನು, ನಮ್ಮ ಸಿಬ್ಬಂದಿ ಚಾಸಾ-4 ಮತ್ತು 5 ಹಾಗೂ ಚಾಲಕ ಗುರುನಾಥನಿಗೆ ಕರೆ ಮಾಡಿ ಕಚೇರಿಗೆ ಬರುವಂತೆ ಹೇಳಿದೆ. ರಾತ್ರಿ 09-10 ಕ್ಕೆ ನಾನು ಕಚೇರಿಗೆ ಬಂದು ಚಾಸಾ-4 ಮತ್ತು 5 ರವರನ್ನು ಕರೆದುಕೊಂಡು ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆಎ-32 ಜಿ-1202 ರಲ್ಲಿ ಚಾಲಕ ಗುರುನಾಥನೊಂದಿಗೆ ಸುಲೇಪೇಟ್ ಗ್ರಾಮದ ಬಸವೇಶ್ವರ ಸರ್ಕಲ್ ಹತ್ತಿರ ರಾತ್ರಿ 09-30 ಗಂಟೆಗೆ ಬಂದು ಅಲ್ಲಿ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಚಾರವನ್ನು ತಿಳಿಸಿರುತ್ತೇನೆ. ನಮ್ಮ ಜೊತೆ ದಾಳಿ ಸಂದರ್ಭದಲ್ಲಿ ಹಾಜರಿರಲೂ ಸದರಿ ಪಂಚರು ಒಪ್ಪಿದ್ದರಿಂದ ಅವರನ್ನು ನಮ್ಮ ಜೊತೆ ಕರೆದುಕೊಂಡು ನಿಡಗುಂದಾ ಮಾರ್ಗವಾಗಿ ಹಲಕೋಡಾ ಕ್ರಾಸ್ ಬಳಿ ರಾತ್ರಿ 10-20 ರ ಸುಮಾರಿಗೆ ಬಂದು ಸದರಿ ಸ್ಥಳದಲ್ಲಿ ರಸ್ತೆ ಗಸ್ತು ಮಾಡುತ್ತಿದ್ದೆವು.

ಅದೇ ಸಮಯಕ್ಕೆ ಹಲಕೋಡಾ ಗ್ರಾಮದ ಕಡೆಯಿಂದ ಒಂದು ದ್ವಿ-ಚಕ್ರ ವಾಹನ ಸಂಖ್ಯೆ ಕೆಎ-32 ಇಎನ್-6084 ಬರುತ್ತಿರುವುದು ಕಂಡು ಬಂತು. ಸದರಿ ವಾಹನವನ್ನು ನಾನು ಮತ್ತು ಸಿಬ್ಬಂದಿ ತಡೆದು ನಿಲ್ಲಿಸಿದೆವು. ಸದರಿ ವಾಹನದಲ್ಲಿ ಇಬ್ಬರು ವ್ಯಕ್ತಿಗಳಿದ್ದು ಸದರಿಯವರಿಗೆ ನಾವು ಅಬಕಾರಿ ಪೊಲೀಸರಿದ್ದು ತಪಾಸಣೆ ಮಾಡುತ್ತಿದ್ದೇವೆ ಅಂತಾ ತಿಳಿಸಿದೆವು. ಸದರಿ ದ್ವಿ-ಚಕ್ರ ವಾಹನ ಮತ್ತು ಅದರ

ಮೇಲೆ ಕುಳಿತಿದ್ದ ಇಬ್ಬರು ವ್ಯಕ್ತಿಗಳನ್ನು ಪರಿಶೀಲಿಸಲಾಗಿ ಅವರಿಬ್ಬರು ತಮ್ಮ ನಡುವೆ ಒಂದು ಪ್ಲಾಸ್ಟಿಕ ಚೀಲವನ್ನು ಇಟ್ಟುಕೊಂಡಿರುವುದು ಕಂಡು ಬಂತು. ಸದರಿ ಚೀಲದಲ್ಲಿ ಏನಿದೆ ಎಂದು ನಾವು ಪ್ರಶ್ನಿಸಲಾಗಿ ಆ ಇಬ್ಬರು ಆಸಾಮಿಗಳ ಪೈಕಿ ವಾಹನವನ್ನು ಚಲಾಯಿಸುತ್ತಿದ್ದ ವ್ಯಕ್ತಿ 'ಮಾಲು ಇದ' ಅಂತಾ ಹೇಳಿದ ಹಾಗೂ ಹಿಂಬದಿ ಕುಳಿತಿದ್ದ ವ್ಯಕ್ತಿ ಏನು ಹೇಳಲಿಲ್ಲ. ನಂತರ ನಾನು ಸದರಿ ಪ್ಲಾಸ್ಟಿಕ್ ಚೀಲವನ್ನು ತಪಾಸಣೆ ಮಾಡುವ ಸಲುವಾಗಿ ಸ್ಥಳದಲ್ಲೆ ಪಂಚರ ಸಮಕ್ಷಮ ಒಂದು ಶೋಧನಾ ಸಮೂಚಿತ ಪತ್ರವನ್ನು ತಯಾರಿಸಿ, ಅದಕ್ಕೆ ಚಾಸಾ-1 ಮತ್ತು 2 ಪಂಚರು ಹಾಗೂ ಸದರಿ ಇಬ್ಬರು ವ್ಯಕ್ತಿಗಳ ಸಹಿ ಪಡೆದೆನು. ಸದರಿ ಬಿಳಿ ಬಣ್ಣದ ಪ್ಲಾಸ್ಟಿಕ ಚೀಲವನ್ನು ಪರಿಶೀಲಸಲಾಗಿ ಅದು ಡಿ.ಎ.ಪಿ. ಗೊಬ್ಬರದ ಚೀಲವಾಗಿದ್ದು ಅದರೊಳಗೆ ತಲಾ 1 ಲೀಟರ್ ಸಾಮರ್ಥ್ಯದ 40 ಪ್ಲಾಸ್ಟಿಕ ಚೀಲಗಳು ಇದ್ದು ಅವುಗಳಲ್ಲಿ ಮಜ್ಜಿಗೆ ರೀತಿಯ ಬಿಳಿ ಬಣ್ಣದ ದ್ರಾವಣ ತುಂಬಲಾಗಿತ್ತು. ಸದರಿ ದ್ರಾವಣವನ್ನು ಮೂಸಿ ನೋಡಲಾಗಿ ಅದು ಕಲಬೇರಿಕೆ ಸೇಂದಿ ಎಂದು ಖಚೀತವಾಯಿತು.

ನನಗೆ ಬಂದ ಬಾತ್ಮಿ ಖಚಿತವಾಗಿದ್ದರಿಂದ ಇಬ್ಬರು ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಬೈಕ್ ಚಲಾಯಿಸುತ್ತಿದ್ದ ವ್ಯಕ್ತಿ ತನ್ನ ಹೆಸರು ದಾನಪ್ಪ ಮತ್ತು ಆತನ ಹಿಂದೆ ಕುಳಿತಿದ್ದ ಮತ್ತೊಬ್ಬ ಸೈದಪ್ಪ ಎಂಬುದಾಗಿ ಹಾಗೂ ಇಬ್ಬರು ಪೊತಂಗಲ್ ವಾಸಿಗಳು ಎಂದು ತಿಳಿಸಿರುತ್ತಾರೆ. ಸದರಿ ಇಬ್ಬರು ಆರೋಪಿತರು ಸೇಂದಿಯನ್ನು ಅಕ್ರಮ ಸ್ವಾಧೀನ ಹೊಂದಿದ್ದರಿಂದ ಸದರಿ ಸೇಂದಿ ತುಂಬಿದ್ದ ಎಲ್ಲಾ 40 ಪ್ಲಾಸ್ಟಿಕ ಪ್ಯಾಕೆಟುಗಳನ್ನು ಗೊಬ್ಬರ ಚೀಲದ ಸಮೇತ ಪಂಚರ ಸಮಕ್ಷಮ ಜಪ್ತುಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಒಂದು 1 ಲೀಟರ್ ಸಾಮರ್ಥ್ಯದ ಖಾಲಿ ನೀರಿನ ಬಾಟಲಿಯಲ್ಲಿ ಸೇಂದಿಯನ್ನು ಸಂಗ್ರಹಿಸಿ ಅದನ್ನು ಪ್ರತ್ಯೇಕವಾಗಿ ತೆಗೆದಿರಿಸಿ, ಅರಗಿನಿಂದ ಅದರ ಮುಚ್ಚಳವನ್ನು ಬಿಳಿ ಬಟ್ಟೆ ಸುತ್ತಿ ಸೀಲ್ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ರಾತ್ರಿ 10-30 ರಿಂದ 11-30 ರವರೆಗೆ ವಿದ್ಯುತ್ ಕಂಬಕ್ಕೆ ಅಳವಡಿಸಲಾಗಿದ್ದ ದೀಪದ ಬೆಳಕಿನ ಸಹಾಯದಿಂದ ಬರೆದಿರುತ್ತೇನೆ.

ಘಟನಾ ಸ್ಥಳದ ಪೂರ್ವಕ್ಕೆ ಪೊತಂಗಲ್ ರಸ್ತೆ, ಪಶ್ಚಿಮಕ್ಕೆ ಅರಣ್ಯ, ಉತ್ತರಕ್ಕೆ ನಿಡಗುಂದಾ ರಸ್ತೆ ಮತ್ತು ದಕ್ಷಿಣಕ್ಕೆ ಹಲಕೋಡಾ ರಸ್ತೆ ಇರುತ್ತದೆ.

ನಂತರ ವಶಕ್ಕೆ ಪಡೆದ ಆರೋಪಿತರು, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಸಿಬ್ಬಂದಿ ಸಮೇತ ರಾತ್ರಿ 12-00- 12-30 ರ ಸುಮಾರಿಗೆ ಕಚೇರಿಗೆ ವಾಪಸ್ಸಾಗಿ ಆರೋಪಿತರ ವಿರುದ್ಧ ಸ್ವ-ಪಿರ್ಯಾದಿಯನ್ನು ತಯಾರಿಸಿ ಅದರ ಆಧಾರದ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯ ಪ್ರತಿಗಳನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ.

ಆರೋಪಿತರನ್ನು ದಸ್ತಗಿರಿ ಮಾಡಿ ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಸದರಿ ಸ್ವ-ಪಿರ್ಯಾದನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-1 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಿಪಿ-1 ರ ದಾಖಲೆಯ ಆಧಾರದ ಮೇಲೆ ನಾನು ದಾಖಲಿಸಿದ ಪ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-2 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಘಟನಾ ಸ್ಥಳದಲ್ಲಿ ಜರುಗಿಸಿದ ಶೋಧನಾ ಸಮೂಚಿತ ಪತ್ರವನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-3 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-4 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಪಡೆಯಲಾದ ಮಾದರಿ ಸೀಲು ಪತ್ರವನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-5 ಎಂದೂ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ನಾನು ರಾಸಾಯನಿಕ ಪರೀಕ್ಷೆಗಾಗಿ ಸೇಂದಿಯನ್ನು ಸಂಗ್ರಹಿಸಲು ಬಳಸಲಾಗಿದ್ದ ಒಂದು ಲೀಟರ್ ಸಾಮರ್ಥ್ಯದ ಖಾಲಿ ನೀರಿನ ಬಾಟಲಿಯನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಖಾಲಿ ಬಾಟಲಿಯನ್ನು ಈಗ ಮು.ಮಾ. 1 ಎಂದು ಗುರುತಿಸಲಾಯಿತು.

ದಾಳಿ ಕಾಲಕ್ಕೆ ನಾನು ದಸ್ತಗಿರಿ ಮಾಡಿದ್ದ ಆರೋಪಿತರಾದ ದಾನಪ್ಪ ಮತ್ತು ಸೈದಪ್ಪನನ್ನು ಮತ್ತೇ ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ತಕರಾರು ಮಾಡುವುದಿಲ್ಲ ಆರೋಪಿ ಪರ ವಕೀಲರು ನುಡಿಯುತ್ತಾರೆ.

ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-8 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎ.ಎಸ್.ಹೆಚ್. ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**